# ಮದುವೆಯ ಬಂಗಾರದ ಬಂಧ



ಹೊಸ ಬಾಳಿನ ಹೊಸಿಲಲಿ ನಿಂತಿರುವ ನವ ಜೋಡಿಗಳಿಗೆ ವರನಟ ರಾಜ್‌ಕುಮಾರ್ ಅವರಿಂದ ಹಾರೈಕೆ

**ಏಪ್ರಿಲ್ 27ರಂದು ಐವತ್ತನೇ ವರ್ಷದ ಉಚಿತ ಸಾಮೂಹಿಕ ವಿವಾಹ ಮಹೋತ್ಸವ ಧರ್ಮಸ್ಥಳದಲ್ಲಿ ನಡೆಯುತ್ತಿದೆ.**

**■ ಆರ್.ಯನ್. ಪೂವಣಿ**

'ಹೊಸ ಬಾಳಿನ ಹೊಸಿಲಲಿ ನಿಂತಿರುವ ಹೊಸ ಜೋಡಿಗೆ ಶುಭವಾಗಲಿ' ಎನ್ನುವ, ರಾಜ್‌ಕುಮಾರ್ ಅಭಿನಯದ 'ಶ್ರಾವಣ ಬಂತು' ಸಿನಿಮಾದ ಗೀತೆಯೊಂದಿಗೆ ನೆನಪಾಗುವಂತಹದ್ದು ಧರ್ಮಸ್ಥಳದ ಸಾಮೂಹಿಕ ವಿವಾಹಗಳ ವೈಭವ. ಮದುವೆಗಳನ್ನು ಆಡಂಬರದಿಂದ ಮುಕ್ತಗೊಳಿಸಿ, ಅರ್ಥಪೂರ್ಣಗೊಳಿಸುವ ಉದ್ದೇಶದಿಂದ ಆರಂಭವಾದ ಧರ್ಮಸ್ಥಳದ ಸಾಮೂಹಿಕ ವಿವಾಹ ಯೋಜನೆಗೀಗ ಐವತ್ತರ ಸಂಭ್ರಮ. ಈ ಬಾರಿ ಏಪ್ರಿಲ್ 27ರಂದು ಬುಧವಾರ ಐವತ್ತನೇ ವರ್ಷದ ಉಚಿತ ಸಾಮೂಹಿಕ ವಿವಾಹ ನಡೆಯುತ್ತಿದೆ.

'ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು' ಎಂಬ ಮಾತಿದೆ. ಮದುವೆಯ ಜೊತೆಗೆ ತಳಕು ಹಾಕಿಕೊಂಡಿರುವ ದುಬಾರಿ ಖರ್ಚನ್ನು ಈ ಮಾತು ಸೂಚಿಸುತ್ತದೆ. ಬಡವರು, ಮಧ್ಯಮ ವರ್ಗದವರ ಪಾಲಿಗಂತೂ ಮದುವೆ ಎನ್ನುವುದು ದುಬಾರಿಯ ಬಾಬತ್ತು. ಮಕ್ಕಳ ಮದುವೆಗಾಗಿ ಮನೆ–ಹೊಲ ಮಾರಿಕೊಂಡವರ ಸಂಖ್ಯೆ ದೊಡ್ಡದಿದೆ. ಮದುವೆಯ ಹೆಸರಿನಲ್ಲಿ ನಡೆಯುವ ಈ ದುಂದಿಗೆ ಕಡಿವಾಣ ಹಾಕುವ ಉದ್ದೇಶ ಸಾಮೂಹಿಕ ವಿವಾಹ ಪರಿಕಲ್ಪನೆಯ ಹಿಂದಿದೆ.

ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು 1972ರಲ್ಲಿ ಆರಂಭಿಸಿದ ಸಾಮೂಹಿಕ ವಿವಾಹದ ಆರಂಭದ ವರ್ಷದಲ್ಲಿ 88 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು. ಅಂದಿನಿಂದ ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ಧರ್ಮಸ್ಥಳ ನವ ವಧು ವರರ ಕಲರವಕ್ಕೆ ಸಾಕ್ಷಿಯಾಗುತ್ತಿದೆ. ಕಳೆದ ವರ್ಷದವರೆಗೆ, 12 ಸಾವಿರದ 392 ಜೋಡಿ ಧರ್ಮಸ್ಥಳದ ಸಾಮೂಹಿಕ ವಿವಾಹ ಚಪ್ಪರದಲ್ಲಿ ಹಾರದೊಂದಿಗೆ ಮನಸ್ಸು ಬದಲಿಸಿಕೊಂಡಿದೆ.

ಸಾಮೂಹಿಕ ವಿವಾಹದಡಿ ಈವರೆಗೆ ನಡೆದಿರುವ ಮದುವೆಗಳಲ್ಲಿ, ವಿಚ್ಛೇದನ ಪ್ರಕರಣ ಒಂದೂ ವರದಿಯಾಗಿಲ್ಲ. ಹಿರಿಯರ ಒಪ್ಪಿಗೆಯ ಮೇರೆಗೆ ಅಂತರ್ಜಾತಿ ಮತ್ತು ಪ್ರೇಮವಿವಾಹಕ್ಕೂ ಅವಕಾಶ ಕಲ್ಪಿಸಲಾಗಿದೆ.

ಪ್ರತಿ ವರ್ಷ ಸಾಮೂಹಿಕ ವಿವಾಹ ಮಹೋತ್ಸವಕ್ಕೆ ಮೂರು ತಿಂಗಳ ಮೊದಲೇ ಮಾಧ್ಯಮಗಳಲ್ಲಿ ಮಾಹಿತಿ ನೀಡಲಾಗುತ್ತದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕರ್ತರ ಮೂಲಕವೂ ಮಾಹಿತಿ ಪ್ರಸಾರಗೊಳ್ಳುತ್ತದೆ. ಆಸಕ್ತ ವಧು ವರರು ಆಯಾ ಗ್ರಾಮ ಪಂಚಾಯಿತಿಯಿಂದ ಸೂಕ್ತ ದಾಖಲೆ ಪತ್ರಗಳೊಂದಿಗೆ ಧರ್ಮಸ್ಥಳದಲ್ಲಿರುವ ಸಾಮೂಹಿಕ ವಿವಾಹ ನೋಂದಣಿ ಕಾರ್ಯಾಲಯದಲ್ಲಿ ಹೆಸರು ನೋಂದಾಯಿಸಬೇಕು. ಮದುವೆಯ ಧಾರ್ಮಿಕ ವಿಧಿವಿಧಾನಗಳಿಗೆ ಬೇಕಾದ ಎಲ್ಲಾ ಸವಲತ್ತುಗಳನ್ನು ದೇವಸ್ಥಾನದ ವತಿಯಿಂದ ಒದಗಿಸಲಾಗುವುದು.



ಸಾಮೂಹಿಕ ವಿವಾಹದಲ್ಲಿ ನೂತನ ಜೋಡಿಗಳಿಗೆ ಶಿವರಾಜ್‌ಕುಮಾರ್ ಶುಭಾಶಯ

ವಧು ವರರು ಹಾಗೂ ಸಂಬಂಧಿಕರು ಮದುವೆ ಹಿಂದಿನ ದಿನ ಧರ್ಮಸ್ಥಳಕ್ಕೆ ಬರಬೇಕು. ಉಚಿತ ಊಟ–ವಸತಿ ಸೌಲಭ್ಯವಿದೆ. ಮದುವೆಯ ದಿನ ಮುಂಜಾನೆ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, ಹೇಮಾವತಿ ಹೆಗ್ಗಡೆ ಮತ್ತು ಕುಟುಂಬದವರು ತಮ್ಮ ನಿವಾಸದಲ್ಲಿ ವಧುವಿಗೆ ಸೀರೆ–ರವಿಕೆ ಹಾಗೂ ವರನಿಗೆ ಧೋತಿ–ಶಾಲು ನೀಡುತ್ತಾರೆ. ವಧುವಿನ ಮಂಗಳಸೂತ್ರವನ್ನೂ ನೀಡಲಾಗುತ್ತದೆ. ವಧು ವರರು ಅಲಂಕೃತರಾಗಿ ಸಂಜೆ ಐದಕ್ಕೆ ದೇವಸ್ಥಾನದ ವಠಾರದಲ್ಲಿ ಸೇರುತ್ತಾರೆ. ಅಲ್ಲಿಂದ 6 ಗಂಟೆಗೆ ವೈಭವದ ಮೆರವಣಿಗೆಯಲ್ಲಿ ವಿವಾಹ ನಡೆಯುವ ಅಮೃತವರ್ಷಿಣಿ ಸಭಾಭವನಕ್ಕೆ ಎಲ್ಲಾ ವಧು ವರರನ್ನು ಕರೆದುಕೊಂಡು ಹೋಗಲಾಗುತ್ತದೆ. ನಂತರದ್ದು ಮದುವೆಯ ವಿಧಿವಿಧಾನ. ಮದುವೆಯ ನಂತರ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಪಡೆದು, ಅನ್ನಪೂರ್ಣ ಭೋಜನಾಲಯದಲ್ಲಿ ಮದುವೆ ಊಟ ಸ್ವೀಕರಿಸುವುದರೊಂದಿಗೆ ಮದುವೆಯ ಕಾರ್ಯ ಕೊನೆಗೊಳ್ಳುತ್ತದೆ.

ಮದುವೆಯ ಸಂದರ್ಭದಲ್ಲಿ ದೈವ ಹಾಗೂ ಧರ್ಮಾಧಿಕಾರಿಯ ಸಾಕ್ಷಿಯಾಗಿ ವಧು ವರರು ಕೈಗೊಳ್ಳುವ ಪ್ರಮಾಣ ಹೀಗಿದೆ: 'ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಇಂದು ಮಂಗಲ ಮುಹೂರ್ತದಲ್ಲಿ ವಧೂವರರಾಗಿ ಪವಿತ್ರ ಬಾಂಧವ್ಯವನ್ನು ಹೊಂದಿರುವ ನಾವು ಮುಂದೆ ಜೀವನದುದ್ದಕ್ಕೂ ಧರ್ಮ, ಅರ್ಥ ಮತ್ತು ಕಾಮದಲ್ಲಿ ಸಹಚರರಾಗಿ ಪರಸ್ಪರ ಪ್ರೀತಿ–ವಿಶ್ವಾಸದಿಂದ, ಒಬ್ಬರಿಗೊಬ್ಬರು ವಂಚನೆ ಮಾಡದೆ ಹಾಗೂ ಯಾವುದೇ ದುರಭ್ಯಾಸಕ್ಕೂ ತುತ್ತಾಗದೆ ಬದುಕುತ್ತೇವೆ.'

ಈ ಮೊದಲು ಸಾಮೂಹಿಕ ವಿವಾಹದಲ್ಲಿ ಮದುವೆಯಾದ ದಂಪತಿಗಳ ಮಕ್ಕಳು ಕೂಡ ನಂತರದ ವರ್ಷಗಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮದುವೆಯಾಗಿರುವುದು ವಿಶೇಷ. ವರನಟ ರಾಜ್‌ಕುಮಾರ್, ಪಾರ್ವತಮ್ಮ ರಾಜಕುಮಾರ್, ಶಿವರಾಜ್‌ಕುಮಾರ್, ಶ್ರೀನಾಥ್, ತಾರಾ, ರಮೇಶ್ ಅರವಿಂದ್ ಸೇರಿದಂತೆ ಅನೇಕ ತಾರೆಗಳು ಸಾಮೂಹಿಕ ವಿವಾಹ ಸಮಾರಂಭದಲ್ಲಿ ಭಾಗವಹಿಸಿ ಯುವಜೋಡಿಗೆ ಶುಭ ಹಾರೈಸಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in